ಕ್ರಮವನ್ನು ತೆಗೆದುಕೊಂಡಿದ್ದೇನೆ. ಈಗಾಗಲೇ 5-6 ಜನರನ್ನು ಸಸ್ಪೆಂಡ್ ಮಾಡಿದ್ದೇನೆ. ಇನ್ನು ಕಟ್ಟು ನಿಟ್ಟಾದಂತಹ ಕ್ರಮ ತೆಗೆದುಕೊಂಡು ವೈದ್ಯರುಗಳು ಹಳ್ಳಿಗಳಲ್ಲಿ ಸೇವೆ ಮಾಡುವುದಕ್ಕೆ ಪ್ರಯತ್ನ ಮಾಡಿಸುತ್ತೇನೆ. ಈಗಾಗಲೇ 133 ವೈದ್ಯರುಗಳನ್ನು ನೇಮಿಸಲು ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ಬರೆದಿದ್ದೇವೆ. ಕೂಡಲೇ ಅವರನ್ನು ನೇಮಕ ಮಾಡುತ್ತೇವೆ.

ವಿಷಯ : ವೀರಾಜ ಪೇಟೆ ತಾಲ್ಲೂಕಿನಲ್ಲಿ ಶಾಲೆಗಳ ದುಸ್ಥಿತಿ.

693

ಶ್ರೀಮತಿ ಸುಮ ವಸಂತ (ವೀರಾಜ ಪೇಟೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಾಜಪೇಟೆ ತಾಲ್ಲೂಕಿನ ಎಲ್ಲಾ ಪ್ರಾಥಮಿಕ ಶಾಲೆಗಳು ಜೀರ್ಣಾವಸ್ಥೆ-ಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಇ) ಅಧ್ಯಾಪಕರ ಮತ್ತು ಸಿಬ್ಬಂದಿ ಕೊರತೆಯನ್ನು ಯಾವಾಗ ನಿವಾರಿಸಲಾಗುವುದು?

ಈ) ಸರ್ಕಾರ ಈ ವರ್ಷ ಶಾಲಾ ದುರಸ್ತಿಗಾಗಿ ಎಷ್ಟು ಹಣ ಮಂಜೂರು ಮಾಡಿರುತ್ತದೆ?

ಡಾ॥ ಹೆಗ್ಗಪ್ಪ .ಡಿ ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ವೀರಾಜಪೇಟೆ ತಾಲ್ಲೂಕಿನಲ್ಲಿ ಪ್ರಾಥ'ಮಿಕ ಶಾಲೆಗಳನ್ನು ದುರಸ್ಥಿಪಡಿಸ ಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸರ್ಕಾರಿ ಆದೇಶ ಸಂಖ್ಯೆ : ಇಡಿ 198 ಯೋಸಕ 92 ದಿನಾಂಕ 2-1-92 ರಲ್ಲಿ ಮತ್ತು ದಿನಾಂಕ 18-8-92ರಲ್ಲಿ ಹಣ ಬಿಡುಗಡೆ ಮಾಡಿದೆ.

ಇ) ಕೊಡಗು ಜಿಲ್ಲೆಯಲ್ಲಿ ಒಟ್ಟು 214 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಈ ಹುದ್ದೆಗಳನ್ನು ವಿಶೇಷ ನೇಮಕಾತಿ ಮತ್ತು ಸಾಮಾನ್ಯ ನೇಮಕಾತಿ ನಿಯಮಗಳ ಪ್ರಕಾರ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ಮುಂಬರುವ 1993-94ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಕೊಡಗು ಜಿಲ್ಲೆಗೆ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡ ದುರಸ್ತಿಗಾಗಿ ಪ್ರಸಕ್ತ ಸಾಲಿನಲ್ಲಿ 6 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ.

ಶ್ರೀಮತಿ ಸುಮಾವಸಂತ : ಮಾನ್ಯ ಅಧ್ಯಕ್ಷರೇ, ಮೊದಲನೆಯ ಪ್ರಶ್ನೆಗೆ ವೀರಾಜಪೇಟೆ ತಾಲ್ಲೂಕಿಗೆ ಪ್ರಾಥಮಿಕ ಶಾಲೆಗಳ ದುರಸ್ತಿಗೆ ಬೇಕಾದಂತಹ ಹಣವನ್ನು ಸರ್ಕಾರ ಬಿಡುಗಡೆ ಮಾಡಿರುವುದಾಗಿ ತಿಳಿಸಿದ್ದಾರೆ. ಎಷ್ಟು ಹಣ ಇದಕ್ಕೆ ಬಿಡುಗಡೆ ಮಾಡಲಾಗಿದೆ ಎಂದು ಕೇಳುತ್ತಿದ್ದೇನೆ. ಅದೇ ರೀತಿ 1993-94ನೇ ಸಾಲಿಗೆ ಶಿಕ್ಷಕರ ಕೊರತೆಯನ್ನು ನೀಗಲಾಗುವುದು ಎಂದು ಹೇಳುತ್ತಿದ್ದಾರೆ. ನಾವು ಪ್ರತಿ ವರ್ಷ ಇದೇ ರೀತಿಯ ಆಶ್ವಾಸನೆಯನ್ನು ಕೇಳುತ್ತಿದ್ದೇವೆ. 1993ರ ಜೂನ್‌ನಲ್ಲಿ ಶಾಲೆ ಪ್ರಾರಂಭವಾಗುವುದರೊಳಗೆ ಖಡಾಖಂಡಿತವಾಗಿ ಭರ್ತಿ ಮಾಡುತ್ತೇವೆ ಎನ್ನುವ ಆಶ್ವಾಸನೆ ಕೊಡಬೇಕು ಎಂದು ಕೇಳುತ್ತಿದ್ದೇನೆ. ಏಕೆಂದರೆ ನಮ್ಮ ಈ ಸರ್ಕಾರಿಶಾಲೆಗೆ ಬಡ ವಿದ್ಯಾರ್ಥಿಗಳು ಹಾಗೂ ಹರಿಜನ ಗಿರಿಜನ ವಿದ್ಯಾರ್ಥಿಗಳೇ ಬರುತ್ತಿದ್ದಾರೆ. ಅವರ ವಿದ್ಯೆಯ ಮಟ್ಟ ಈ ರೀತಿಯಾದರೇ ಹೇಗೆ ಸುಧಾರಣೆ ಮಾಡುವುದಕ್ಕೆ ಸಾಧ್ಯ? ಈಗ ನಾವು ವಯಸ್ಕರ ಶಿಕ್ಷಣ, ಸಾಕ್ಷರತಾ ಆಂದೋಲನಾ ಎಂದು ಮಾಡುತ್ತಿದ್ದೇವೆ. ಅದಕ್ಕೋಸ್ಕರ ಎಷ್ಟೋಂದು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಸರಿಯಾದ ಅಧ್ಯಾಪಕರು ಇಲ್ಲದೇ ಸರಿಯಾದ ಶಾಲಾ ಕಟ್ಟಡ ಇಲ್ಲದೆ ವಿದ್ಯೆಯ ಮಟ್ಟ ಹೇಗೆ ಸುಧಾರಣೆ ಮಾಡಲಿಕ್ಕೆ ಸಾಧ್ಯ ಎಂದು ಕೇಳುತ್ತಿದ್ದೇನೆ.

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಈ ಮಲೆನಾಡು ಭಾಗದಲ್ಲಿ ಸ್ವಲ್ಪ ಹೆಚ್ಚಿನ ಮಳೆಯಿಂದ ಶಾಲಾ ಕಟ್ಟಡಗಳು ದುರಸ್ತಿಗೆ ಬರುವಂಥಾದ್ದು ಸ್ವಾಭಾವಿಕ. ಆದರೆ ಅವುಗಳನ್ನು ನಾವು ರಿಪೇರಿ ಮಾಡಿಸುತ್ತಿದ್ದೇವೆ. 1992-93ನೇ ಸಾಲಿನಲ್ಲಿ 3 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಆದನಂತರ 18-8-92ರಲ್ಲಿ 3 ಲಕ್ಷ ಸೇರಿಸಿ ಒಟ್ಟು 16 ಸಾವಿರ ರೂಪಾಯಿಗಳನ್ನು ಆ ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆ. 1990-91ನೇ ಸಾಲಿನಲ್ಲಿ 3 ಲಕ್ಷ 16 ಸಾವಿರ ರೂಪಾಯಿಗಳನ್ನು ಮತ್ತು 91-92ನೇ ಸಾಲಿನಲ್ಲಿ 10 ಲಕ್ಷ ರೂಪಾಯಿಗಳನ್ನು ಆ ಜಿಲ್ಲೆಯ ಪ್ರಾಥಮಿಕ ಶಾಲೆಕಟ್ಟಡದ ರಿಪೇರಿಗಾಗಿ ಬಿಡುಗಡೆ ಮಾಡಲಾಗಿತ್ತು. ಹೀಗಾಗಿ ಪ್ರತಿವರ್ಷವೂ ಶಾಲಾ ಕಟ್ಟಡದ ದುರಸ್ತಿಗಾಗಿ ಆ ಜಿಲ್ಲೆಗೆ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ. ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕರುಗಳು ಬಹಳ ಕಡಿಮೆ ಇದ್ದಾರೆ ಎಂದು ಮಾನ್ಯ ಸದಸ್ಯರಿಯವರು ಹೇಳಿರುವುದು ನಿಜವಾದಂತಹ ಪರಿಸ್ಥಿತಿ. ಈಗಾಗಲೇ ಹೇಳಿದಹಾಗೆ ಮುಂದೆ ಬರುವ ಒಂದೆರಡು ತಿಂಗಳುಗಳಲ್ಲೇ ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಹೊಸ ಶೈಕ್ಷಣಿಕ ವರ್ಷದಲ್ಲಿ ಅಲ್ಲಿಗೆ ಅಧ್ಯಾಪಕರುಗಳನ್ನು ನಾವು ಕೊಡುತ್ತಿದ್ದೇವೆ. ಮುಂದೆ ಅವರಿಂದ ಈ ರೀತಿಯ ಪ್ರಶ್ನೆ ಬರಲಾರದ ಹಾಗೆ ನೋಡಿಕೊಳ್ಳುತ್ತೇನೆ.

11.15 ಎ.ಎಂ

ಶ್ರೀಮತಿ ಸುಮವಸಂತ : ನಾನು ನನ್ನ ಮತಕ್ಷೇತ್ರದಲ್ಲಿ, ಅಧ್ಯಾಪಕರುಗಳ ಕೊರತೆ ಇದೆ. ಶಾಸಕರಾಗಿ ನೀವು ಏನು ಮಾಡಿದಿರಿ ಎಂದು ಕೇಳುತ್ತಿದ್ದಾರೆ. ಈ ಕೊರತೆ 3-4 ವರ್ಷಗಳಿಂದ ಇದೆ. ಫಿಲ್‌ಅಪ್ ಮಾಡುತ್ತೇವೆ ಎಂದು ಹೇಳುತ್ತಾರೆಯೇ ಹೊರತು ಮಾಡುವುದಿಲ್ಲ. ಕೇವಲ ಆಶ್ವಾಸನೆ ಕೊಟ್ಟರೆ ಸಾಕಾಗುವುದಿಲ್ಲ. ನಮ್ಮ ಕೊಡಗು ಜಿಲ್ಲೆಯಲ್ಲಿ 214 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ. ಇವುಗಳನ್ನು ಯಾವಾಗ ಫಿಲ್‌ಅಪ್ ಮಾಡುತ್ತೀರಿ?

ಡಾ॥ ಹೆಗ್ಗಪ್ಪ ಡಿ. ಲಮಾಣಿ : ನಾನು ಆಗಲೇ ಹೇಳಿದ ಹಾಗೆ 1356

ಅಧ್ಯಾಪಕರುಗಳನ್ನು ಈಗಾಗಲೇ ನೇಮಿಸಿಕೊಳ್ಳಲು ಆಜ್ಞೆ ಕೊಟ್ಟಿದ್ದೇನೆ. ಇನ್ನೂ 6812 ಅಧ್ಯಾಪಕರುಗಳನ್ನು ನೇಮಿಸಲಿಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಮುಂದೆ ರೆಗ್ಯುಲರ್ ನೇಮಕಾತಿಯಲ್ಲಿ ಮತ್ತೆ 4000 ಅಧ್ಯಾಪಕರುಗಳನ್ನು ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಹೀಗಾಗಿ ನಾವು ಸುಮಾರು 10,000 ಅಧ್ಯಾಪಕರುಗಳನ್ನು ತೆಗೆದುಕೊಳ್ಳತಕ್ಕ ವ್ಯವಸ್ಥೆ ಮಾಡಿದ್ದೇವೆ. ಶಾಲೆಗಳ ದುರಸ್ತಿಗಾಗಿ ಈಗಾಗಲೇ ಹೇಳಿದಂತೆ ಪ್ರತಿ ವರ್ಷ ಹಣ ಬಿಡುಗಡೆ ಮಾಡಿಕೊಂಡು ಬಂದಿದ್ದೇವೆ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಸನ್ಮಾನ್ಯ ಶಿಕ್ಷಣ ಮಂತ್ರಿಗಳು ಅವರ ಉತ್ತರದಲ್ಲಿ ಕೊಡಗು ಜಿಲ್ಲೆಗೆ ಶಾಲಾ ಕಟ್ಟಡ ದುರಸ್ತಿಗಾಗಿ ಪ್ರಸಕ್ತ ಸಾಲಿನಲ್ಲಿ 6 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಉದಾಹರಣೆಗೆ ಹೇಳುವುದಾದರೆ ನನ್ನ ಸೋಮವಾರಪೇಟೆ ತಾಲ್ಲೂಕಿನಲ್ಲಿ 146 ಪ್ರೈಮರಿ ಶಾಲೆಗಳು ಇವೆ. ಕಳೆದ ವರ್ಷ ನಾನು ಶಿಕ್ಷಣ ಸಚಿವರ ಹತ್ತಿರ ಹೋಗಿ ಪರಿಸ್ಥಿತಿಯನ್ನು ಹೇಳಿದ್ದರಿಂದ ಎರಡು ಲಕ್ಷ ಜಾಸ್ತಿ ಕೊಟ್ಟರು, ಇಲ್ಲ ಎಂದು ಹೇಳುವುದಿಲ್ಲ. ಈ ವರ್ಷದ ಬಡ್ಜೆಟ್ಟಿನಲ್ಲಿ ಆರು ಲಕ್ಷ ರೂಪಾಯಿಯನ್ನು ಇಡೀ ಜಿಲ್ಲೆಗೆ ಕೊಟ್ಟಿದ್ದಾರೆ. ಸೋಮವಾರ ಪೇಟೆಗೆ ಎರಡು ಲಕ್ಷ, ವೀರಾಜಪೇಟೆಗೆ ಎರಡು ಲಕ್ಷ, ಮಡಿಕೇರಿಗೆ ಎರಡು ಲಕ್ಷ ಹೀಗೆ ಇಟ್ಟಿದ್ದಾರೆ. ನಾನು ಮಂತ್ರಿಯಗಿದ್ದಾಗ ಪ್ರತಿಯೋಂದು ಶಾಲೆಯನ್ನು ನೋಡಿದ್ದೇನೆ. ಅಲ್ಲಿನ ಪರಿಸ್ಥಿತಿ ನನಗೆ ಚೆನ್ನಾಗಿ ಗೊತ್ತಿದೆ. ಅಲ್ಲಿ ಶಾಲಾ ಕಟ್ಟಡಗಳು ಬಹಳ ದುಸ್ಥಿತಿಯಲ್ಲಿವೆ, ಅವುಗಳ ರಿಪೇರಿ ಆಗಬೇಕಾಗಿದೆ. ಮಳೆಗಾಲದಲ್ಲಿ, ಈ ಶಾಲೆಗಳಲ್ಲಿ, ಮಕ್ಕಳು ಕೂಡಲು ಆಗುವುದಿಲ್ಲ. ಈಗ ಕೊಟ್ಟಿರುವ ಹಣ ಏನೇನು ಸಾಲದು. ಕೊಡಗು ಜಿಲ್ಲೆಯಲ್ಲಿ ಮೂರು-ನಾಲ್ಕು ನೂರು ಪ್ರಾಥಮಿಕ ಶಾಲೆಗಳು ಇವೆ. ಆದ್ದರಿಂದ ಆದಷ್ಟು ಹೆಚ್ಚಿನ ಹಣವನ್ನು ಕೊಡುತ್ತೇವೆಂಬ ಆಶ್ವಾಸನೆಯನ್ನು ಈ ಸಭೆಯಲ್ಲಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಪರಿಸ್ಥಿತಿಯ ನೈಜ ಚಿತ್ರಣವನ್ನು ಸಭೆಯ ಮುಂದೆ ಇಟ್ಟಿದ್ದೇನೆ. ಹೆಚ್ಚಿನ ಹಣವನ್ನು ಕೊಡತಕ್ಕ ಅವಕಾಶ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ. ಆಶ್ವಾಸನೆ ಕೊಡುವುದಕ್ಕೆ ಈ ಸಮಯದಲ್ಲಿ ಆಗುವುದಿಲ್ಲ.

ವಿಷಯ : ಆರೋಗ್ಯ ಇಲಾಖೆಯಲ್ಲಿ ದರ್ಜೆ ಮತ್ತು ನೇಮಕಾತಿಯ ನಿಯಮಗಳು.

1141

ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ದರ್ಜೆ ಮತ್ತು ನೇಮಕಾತಿ ನಿಯಮಗಳನ್ನು ಜಾರಿಗೆ ತರಲಾಗಿದೆಯೇ? (ತಂದಿದ್ದಲ್ಲಿ ಅದರ ಪ್ರತಿಯನ್ನು ಒದಗಿಸುವುದು)

ಆ) ತರದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :